"ಓಕೆ... ಓಕೆ. ಒಳಗೆ ಯಾರಾದರೂ ಗೊತ್ತಾ ನಿನಗೆ? ಅವರ ಪರ್ಮಿಷನ್ ಸಿಕ್ಕರೆ ಹೋಗಬಹುದು."

"ಇದನ್ನು ನಾವೇ ಕಟ್ಟಿಸಿದ್ದು ಅಂದೆನಲ್ಲಾ ಮಾರಾಯ. ಅದೆಷ್ಟು ಸಲಾ ಈ ಜಾಗ್ದಲ್ಲಿ ಓಡಾಡಿದೀನಿ ಗೊತ್ತಾ? ನೆಲದಿಂದ ಟೆರೇಸ್‌ವರೆಗಿನ ಎಲ್ಲಾ ಫ್ಲೋರೂ, ಎಲ್ಲಾ ಗೋಡೆನೂ ಗೊತ್ತು ನಂಗೆ."

"ಆಯ್ತುಪ್ಪಾ... ನಿನಗೆ ಈಗ ಯಾರನ್ನ ನೋಡ್ಬೇಕು ಹೇಳು? ಇವತ್ತು ಸಂಡೆ. ನಾಲ್ಕೈದ್ ಜನಾ ಬಂದಿರಬೋದು ಅಷ್ಟೇ. ಬಿಟ್ರೆ ಮೆಂಟೇನನ್ಸ್ ಹುಡುಗರೇ."

ಯಾರನ್ನು ಭೇಟಿಯಾಗಬೇಕು ಎಂಬುದನ್ನು ಹೇಳದೇ ಒಳ ಹೋಗಲು ಸಾಧ್ಯವಿಲ್ಲ ಎಂಬುದು ಗೊತ್ತಾಯಿತು ಶಿವುವಿಗೆ. ಯಾವುದಾದರೂ ಒಂದು ಹೆಸರು ಹೇಳಿ ಹೋಗಿ ಬಿಡೋಣ ಅನ್ನಿಸಿತು. ಹೀಗೇ ಒಂದು ಹೆಸರು ನೆನಪಿಸಿಕೊಳ್ಳುತ್ತಿರುವಂತೆ ಅವನರಿವಿಗೇ ಬಾರದೇ 'ನಾರಾಯಣಪ್ಪ' ಹೆಸರು ಗಂಟಲಿಂದ ಹೊರಬಂತು.

"ನಾ... ನಾ... ನಾರಾಯಣಪ್ಪ" ತೊದಲಿದ ಶಿವು.

ಸೆಕ್ಯುರಿಟಿ, 'ನಾರಾಯಣಪ್ಪ... ನಾರಾಯಣಪ್ಪಾ...' ಎಂದು ಸಣ್ಣಗೆ ಗುನುಗಿಕೊಳ್ಳುತ್ತಾ ಕಂಪ್ಯೂಟರಿನಲ್ಲಿ ಹುಡುಕಿ, "ಆ ಹೆಸರಿನವರು ಯಾರೂ ಇಲ್ಲ ಇಲ್ಲಿ... ಸಾರಿ" ಎಂದ.

ಒಳಗೆ ಹೋಗಬಹುದಾದ ಯಾವ ಸಾಧ್ಯತೆಯೂ ತೋರಲಿಲ್ಲ ಶಿವುವಿಗೆ. ಮತ್ತೆ ಸೆಕ್ಯುರಿಟಿಯೊಡನೆ ವಾದ ಮಾಡುತ್ತಾ ಕುಳಿತರೆ ಬಂದಿರುವ ಮುಖ್ಯ ಕೆಲಸಕ್ಕೆ ತಡವಾಗುತ್ತದೆಂದು ತಿಳಿದಿತ್ತು. ಅಲ್ಲಿಂದಲೇ ಒಮ್ಮೆ ಹಿಮ್ಮಡಿಯೆತ್ತಿ, ಕತ್ತು ಚಾಚಿ ಸಮಾಧಿಯೇನಾದರೂ ಕಂಡೀತೋ ಎಂದು ನೋಡಿದ. ಕಾಣಲಿಲ್ಲ. ಅದಿರುವ ಜಾಗದಲ್ಲೇ ಮೇಲೆ, ಕಟ್ಟಡದ ತುದಿಯಲ್ಲಿ ದೊಡ್ಡದೊಂದು ಜೇನು ಗೂಡು ಕಣ್ಣಿಗೆ ಬಿತ್ತು. 'ಮರ ಕಡಿದು ಬಿಸಾಡಿದ್ರೂ ಮತ್ತೆ ಬಂದು ಬಿಲ್ಡಿಂಗಿಗೇ ಕಟ್ಟಿದೆಯಲ್ಲ, ನನ್ಮಗಂದು...' ಎಂದು ಆಶ್ಚರ್ಯಪಡುತ್ತಾ ಅಲ್ಲಿಂದ ಹೊರಟ.

ಜೇಕೆ ಸರ್ ಮನೆ ಇನ್ನೇನು ಹತ್ತಿರ ಬರುತ್ತಿದೆ ಅನ್ನುವಂತೆ ಎದೆ ಬಡಿತ ಹೆಚ್ಚಾಗತೊಡಗಿತು. ನಡುವೆ ಏನೋ ನೆನಪಾದವನಂತೆ, ಬೈಕನ್ನು ರಸ್ತೆಯ ಬದಿಗೆ ನಿಲ್ಲಿಸಿ, ಬೇರೆ ಡೆವಲಪರ್ ಹತ್ತಿರ ಕೆಲಸ ಮಾಡುತ್ತಿರುವ ತನ್ನ ಗೆಳೆಯನೊಬ್ಬನಿಗೆ ಫೋನ್ ಮಾಡಿ, 'ಮಚ್ಚಾ, ನಿಮ್ ಕಂಪನಿಗೇನಾದರೂ ಜೆಸಿಬಿ ಬಾಡಿಗೆಗೆ ಬೇಕಾ? ಬೇಕಾದ್ರೆ ಹೇಳು, ಒಳ್ಳೇ ರೇಟಿಗೇ ಹಾಕಿ ಕೊಡ್ತೀನಿ. ನಿನ್ ಪರ್ಸಂಟೇಜೂ ಸೇರ್ಸಿ...' ಎಂದ.

## ಕರ್ಕಿ ಕೃಷ್ಣಮೂರ್ತಿ

ವೃತ್ತಿಯಲ್ಲಿ ಸಿವಿಲ್ ಎಂಜಿನಿಯರ್. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಕರ್ಕಿ ಅವರ ಊರು. ಪ್ರಸ್ತುತ ಬೆಂಗಳೂರಿನಲ್ಲಿ ವಾಸ. ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಸೀನಿಯರ್ ಜನರಲ್ ಮ್ಯಾನೇಜರ್. 'ಮಳೆ ಮಾರುವ ಹುಡುಗ' ಮತ್ತು 'ಗಾಳಿಗೆ ಮೆತ್ತಿದ ಬಣ್ಣ' ಅವರ ಕಥಾಸಂಗ್ರಹಗಳು. ಹಲವಾರು ಲೇಖನಗಳು, ಕತೆಗಳು ಕನ್ನಡದ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.